young people of the Commonwealth to make themselves aware of the critical problems and issues. There is no time to spare. It is your future that is at stake

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಮುಳವಾಡ ಏತ ನೀರಾವರಿಯ ಬಗ್ಗೆ ಶಾಸಕರ ಬಂಧನ

ಶ್ರೀ ಎಲ್.ಆರ್. ಶಿವರಾಮೇಗೌಡ :- ಮಾನ್ಯ ಉಪಾಧ್ಯಕ್ಷೀಣಿಯವರೇ, ಮಾನ್ಯ ಶಾಸಕರಾದ ಮನೋಹರ ಐನಾಪುರ್ ಅವರನ್ನು ಅಪಹರಣ ಮಾಡಿರತಕ್ಕಂಥಾದ್ದು ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಇಲ್ಲಿ ಏನಾಗಿದೆ ಎಂದರೆ, ಕನ್ನಡ ಸೇನೆ ನಾಯಕ ಎಂದು ಒಬ್ಬರು ಬೆಂಗಳೂರಿನಿಂದ ಹೋಗಿ ಅಲ್ಲಿ ಸೇರಿಕೊಂಡು ಅವರೂ ಸಹಿತ ಬಲವಂತವಾಗಿ ಅವರನ್ನು ಕೂಡಿಸಿರತಕ್ಕಂಥ ಪ್ರಸಂಗ ಪತ್ರಿಕೆಯಲ್ಲಿ ಬಂದಿದೆ. ಬೇರೆ ಶಾಸಕರು ಹೋಗಿ ಭೇಟಿ ಮಾಡಿದರೂ ಅವರನ್ನು ಬಿಡುವುದಿಲ್ಲ, ಎಂದು ಯಾರು ಅವರನ್ನು ಕೂಡಿಸಿಕೊಂಡಿದ್ದಾರೆ ಅವರು ಹೇಳಿದ್ದಾರೆ. ಇದು ಗಲಭೆಗೆ ಅವಕಾಶವಾಗುತ್ತದೆ. ಒಬ್ಬ ಶಾಸಕರನ್ನು ಹಿಡಿದು ಕೂರಿಸತಕ್ಕದ್ದು ಅವರ ಹಕ್ಕನ್ನು ಮೊಟಕು ಮಾಡಿದಂತಾಗುತ್ತದೆ. ಅವರಿಗೆ ರಕ್ಷಣೆ ಇಲ್ಲದ ಹಾಗಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನು ನಿಲುವನ್ನು ತೆಗೆದುಕೊಂಡಿದೆ? ಅವರನ್ನು ಬಿಡಿಸತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸರ್ಕಾರ ದಯವಿಟ್ಟು ಹೇಳಿಕೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ನಾನು ವಿನಂತಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ನಾನು ಒಂದು ಗಮನಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ.

ಉಪಾಧ್ಯಕ್ಷೀಣಿಯವರು :- ಸರ್ಕಾರದ ಕಡೆಯಿಂದ ತಾವು ಏನಾದರೂ ಹೇಳುವುದಕ್ಕೆ ಸಾಧ್ಯವೇನು?

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿ) :- ಮಾನ್ಯ ಉಪಾಧ್ಯಕ್ಷೀಣಿಯವರೇ, ಮಾನ್ಯ ಶಿವರಾಮೇಗೌಡರು ಹೇಳಿದಂಥ ವಿಷಯ, ನನಗನ್ನಿಸುತ್ತದೆ, ಮುಳವಾಡ ಏತನೀರಾವರಿ ವಿಷಯದ ಬಗ್ಗೆ ಇರಬೇಕು. ಈ ಮುಳವಾಡ ಏತನೀರಾವರಿ ಬಗ್ಗೆ ಈಗಾಗಲೇ ಒಂದು ಕೋಟಿ ಐವತ್ತು ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ ಮತ್ತು ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಇನ್ನೂ ಆ ಕೆಲಸಕ್ಕೆ ಬೇಕಾದರೆ ಹೆಚ್ಚಿನ ಹಣಕಾಸಿನ ವ್ಯವಸ್ಥೆ ಮಾಡುತ್ತೇವೆ ಎಂದು ಕೂಡ ಹೇಳಿದ್ದೇವೆ. ಇಷ್ಟು ಹೇಳಿದರೂ ಕೂಡ, ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಸರ್ಕಾರದ ಪರವಾಗಿ ಮನವಿ ಮಾಡಿದರೂ ಕೂಡ ಈ ತರಹ ಶಾಸಕರನ್ನು ಏನು ಇಟ್ಟುಕೊಂಡಿದ್ದಾರೆ, ಇದರ ಬಗ್ಗೆ ಯೋಗ್ಯ ಕ್ರಮ ಹಾಕಿಕೊಳ್ಳುತ್ತೇವೆ. ಈ ತರಹ ವಾತಾವರಣ ನಿರ್ಮಾಣವಾಗುವುದರಿಂದ ಗಲಭೆ ಆಗುತ್ತದೆ ಎಂದು ಅವರು ಹೇಳಿದ್ದಾರೆ, ಸರ್ಕಾರ ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿ ಈ ಹೇಳಿಕೆಯನ್ನು ನೀಡುತ್ತೇವೆ.

2) ಗುಲ್ಬರ್ಗದ ಕರ್ನಾಟಕ ವಿದ್ಯುತ್ ಮಂಡಲಿಯ, ಪ. ವರ್ಗ ಮತ್ತು ಪ. ಜಾತಿ ಸಂಘದ ಅಧ್ಯಕ್ಷರಿಂದ ಉಪವಾಸ ಸತ್ಯಾಗ್ರಹ

SRI QUAMARUL ISLAM : Madam Deputy Speaker, I would like to draw the attention of the Hon. Minister for Energy regarding Hunger strike until death by the President of the SC/ST Union of the Karnataka Electricity Board in

Gulbarga. All other Associations have also joined and they have stated that if the matter is not solved, they are going to call for Bundh in Gulbarga City. The Executive Engineer (Major Works), KEB, Gulbarga reportedly said to one of the Scheuled Caste employees "HOLEYA". Not only that, the Executive Engineer has also beaten that SC employee infront of so many other SC employees. When this matter was raised that officer was saying that I was always beating you. Why are you so serious? He also told the other people not to take this seriously. The hunger strike has entered into the 5th day. There is every possibility that it is going to lead to law and order problem if the matter is not solved immediately and if the Department is not going to take action in the matter immediately. Whether the Department knows this? If so, what is the action taken by the Department. If not, will the Department take immediate action in this regard.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯಮಂತ್ರಿ) :- ನಮ್ಮ ಸ್ನೇಹಿತರು ಹೇಳಿದ ಹಾಗೆ ನಾಳೆ ಇದರ ವಿಚಾರ ತಿಳಿದು ಸ್ಟೇಟ್ ಮೆಂಟ್ ಕೊಡುತ್ತೇನೆ.

3) ಗುಬ್ಬಿ ತಾಲ್ಲೂಕಿನಲ್ಲಿ ವೋಲ್ಟೇಜ್ ಸಮಸ್ಯೆಯಿಂದ ಜನಜೀವನ ಅಸ್ತವ್ಯಸ್ತ.

ಶ್ರೀ ಟಿ.ಬಿ. ಜಯಚಂದ್ರ :- ಗುಬ್ಬಿ ತಾಲ್ಲೂಕಿನ ನನ್ನ ಕ್ಷೇತ್ರದಲ್ಲಿ ಮೂರು ದಿವಸಗಳಿಂದ ಸಾವಿರಾರು ಜನರು ಕೆ.ಇ.ಬಿ. ವಿರುದ್ಧವಾಗಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ವೋಲ್ಟೇಜ್ ಪ್ರಾಬ್ಲಮ್ ನಿಂದ ಕುಡಿಯುವ ನೀರು ಇಲ್ಲ, ಬೇಸಾಯಕ್ಕೆ ನೀರು ಇಲ್ಲದ ಪರಿಸ್ಥಿತಿ ಉದ್ಭವಿಸಿರುವುದರಿಂದ ಮೂರು ದಿವಸಗಳಿಂದ ಈ ಉಪವಾಸ ಸತ್ಯಾಗ್ರಹವನ್ನು ಶಾಂತ ರೀತಿಯಿಂದ ನಡೆಸುತ್ತಿದ್ದಾರೆ. ಇದುವರೆಗೂ ಇಲಾಖೆಯ ಪರವಾಗಿ ಒಬ್ಬ ಅಧಿಕಾರಿಯೂ ಕೂಡ ಹೋಗಿ ಯಾವುದೇ ತರಹದ ಆಶ್ವಾಸನೆಯನ್ನು ಕೊಟ್ಟಿಲ್ಲ, ಈಗ ನನ್ನನ್ನು ಕರೆಯುತ್ತಿದ್ದಾರೆ. ನಾನು ಅಲ್ಲಿಗೆ ಹೋಗಬೇಕಾಗುತ್ತದೆ. ಹೋಗುವಂಥ ಸಂದರ್ಭದಲ್ಲಿ ಬಹುಶಃ ಏನಾಪುರ ಅವರಿಗೆ ಆಗಿರತಕ್ಕಂಥ ಪರಿಸ್ಥಿತಿ ನನಗೂ ಆಗಬಹುದು. ಆದ್ದರಿಂದ ನನ್ನ ರಕ್ಷಣೆಗೆ ತಾವು ಬರಬೇಕಾಗುತ್ತದೆ. ಸರ್ಕಾರ ಆದೇಶವನ್ನು ಕೊಡಬೇಕು.

ಉಪಾಧ್ಯಕ್ಷಣಿಯವರು :- ನೀವು ಗಮನ ಸೆಳೆಯುವ ಸೂಚನೆಗೆ .ನೋಟೀಸನ್ನು ಕೊಟ್ಟಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ :- ಈ ಸಬ್‌ಸ್ಟೇಷನ್‌ನ್ನು ಮುಗಿಸಿಕೊಟ್ಟರೆ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. ಎಂಟು-ಹತ್ತು ದಿವಸ ಎಂದು ಹೇಳಿ ಈಗ ಆರು ತಿಂಗಳು ಆಯಿತು. ಅದನ್ನು ಮಾಡಿಸಿಕೊಟ್ಟರೆ, ಸಮಸ್ಯೆ ನಿವಾರಣೆಯಾಗುತ್ತದೆ. ಈ ವಿಚಾರವಾಗಿ ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೊಟ್ಟರೆ, ಅವರು ಉಪವಾಸ ಸತ್ಯಾಗ್ರಹವನ್ನು ಕೊನೆಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ, ಸರ್ಕಾರದ ಕಡೆಯಿಂದ ಹೇಳಿಕೆ ಕೊಡಬೇಕು.

ಉಪಾಧ್ಯಕ್ಷರು :- ತಾವು ಈ ವಿಚಾರವಾಗಿ ಗಮನ ಸೆಳೆಯುವ ಸೂಚನೆ ಕಳುಹಿಸಿದ್ದೀರಿ ಆದಷ್ಟು ಬೇಗನೆ ಹಾಕುತ್ತೇವೆ. ಈಗ ಸದನ ಮುಂದೂಡಲ್ಪಟ್ಟು, ಮತ್ತೆ ಮಧ್ಯಾಹ್ನ 3 ಗಂಟೆಗೆ ಸೇರಲಾಗುವುದು.